ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಸಕಲೇಶಪುರ

**ಸಿ.ಸಿ.ಸಂಖ್ಯೆಃ66/2013**

ಫಿರ್ಯಾದುದಾರರು ಃ ನಗರ ಪೊಲೀಸ್ ಠಾಣೆ ಸಕಲೇಶಪುರ

**ಃ ವಿರುದ್ದ ಃ**

ಆರೋಪಿ ಃ ಟಿ.ಪಿ. ಮೋಹನರಾಜ್ ಬಿನ್ ಪುಟ್ಟಸ್ವಾಮಿ,ವಯಸ್ಸು ಮಳಲಿ ಗ್ರಾಮ ಪಂಚಾಯ್ತಿ , ಸಕಲೇಷಪುರ ಪಟ್ಟಣ

ಃದಂ.ಪ್ರ.ಸಂ. ಕಲಂ.**313** ರಡಿಯಲ್ಲಿ ಆರೋಪಿತರ ಹೇಳಿಕೆಃ

**ಪ್ರಶ್ನೆಃ1 :** ಅಭಿಯೋಜನೆಯ ಪರ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದ ಸಾಕ್ಷಿಯನ್ನು ಕೇಳಿಸಿಕೊಂಡಿರುವಿರಾ **?**

ಉತ್ತರಃ

ಆ.**1**

**ಪ್ರಶ್ನೆಃ2 :** ಅ ಸ **1** ಕುಮಾರ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,24-08-2009** ರವರೆಗೆ ಮಳಲಿ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಹಿ ನಕಲು ಮಾಡಿ ಕರ ವಸೂಲಿಗಾರ ಟಿ.ಪಿ.ಮೋಹನ್ ರಾಜುರವರು ಹಣ ದುರುಪಯಾಗ ಮಾಡಿಕೊಂಡ ಬಗ್ಗೆ ಸದರಿ ಸಾಕ್ಷಿಯು ಈಗ ತೋರಿಸಿದ ದೂರಿನ ಪ್ರಕಾರ ದೂರು ಕೊಟ್ಟಿದ್ದು ನಿಪಿ**-1,** ನನ್ನ ಸಹಿ ನಿಪಿ**-1** ಎ ಎಂದು ಗುರುತಿಸಲಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ **?**

ಉತ್ತರಃ

ಆ.**1**

**ಪ್ರಶ್ನೆಃ3 :** ಸದರಿ ಸಾಕ್ಷಿಯು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಆ ಸಮಯದಲ್ಲಿ ಸದರಿ ಸಾಕ್ಷಿಯು ಮಳಲಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಆಗಿದ್ದು ಆಶ್ರಯ ಅಂಬೇಡ್ಕರ್ ಮತ್ತು ಇಂದಿರಾ ಯೆ: ಜನೆಯ ಫಲಾನುಭವಿಗಳಿಗೆ ಕೊಟ್ಟ ಚಿಕ್ಕುಗಳು ಬ್ಯಾಂಕಿನಿಂದ ವಾಪಾಸು ಬಂದ ಕಾರಣ**,** ಈ ಬಗ್ಗೆ ಅವರು

ಬ್ಯಾಂಕಿಗೆ ಹೋಗಿ ಪರಿಶೀಲಿಸಿದಾಗ ಅವರಿಗೆ ಈ ಮೋಸದ ಬಗ್ಗೆ ತಿಳಿದು ಬಂತು. ಎಸ್ ಬಿ ಎಂ ಶಾಖೆಯ **96** ಚೆಕ್ಕುಗಳು ಪರಿಶೀಲಿಸಿದಾಗ ಈ ಮೊಸದ ಬಗ್ಗೆ ಗೊತ್ತಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ4 :**ಸದರಿ ಸಾಕ್ಷಿಯು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಕಾರ್ಪೊರೇಶನ್ ಬ್ಯಾಂಕಿನಲ್ಲಿ ನಿದಿ **1** ಮತ್ತು ನಿದಿ **2** ನರೆಗೆ ಮತ್ತು ಶೌಚಾಲಯ ಫಲಾನುಭವಿಗಳಿಗೆ ಕೊಟ್ಟ ಚೆಕ್ಕುಗಳು ಖಾತೆಯಲ್ಲಿ ಹಣ ಇಲ್ಲ ಎಂದು ವಾಪಾಸು ಬಂದಿತ್ತು ಸರ್ಕಾರದಿಂದ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗಿದ್ದು, ಸದರಿ ಹಣವನ್ನು ಆರೋಪಿಯಾದ ನೀವು ಅಧ್ಯಕ್ಷರು ಮತ್ತು ಕಾರ್ಯದರ್ಶಿಳ ನಕಲು ಸಹಿ ಹಾಕಿ ಬ್ಯಾಂಕಿನಿಂದ ಹಣ ಡ್ರಾ ಮಾಡಿಕೊಂಡಿದ್ದು ಬ್ಯಾಂಕ್ ಪಾಸ್ ಪುಸ್ತಕ ಶಿಟನ್ನು ತೆಗೆದು ನೋಡಿದಾಗ ಗ್ರಾಮ ಪಂಚಾಯಿತಿ ಖಾತೆಯಲ್ಲಿ ಹಣ ಇಲ್ಲ ಎಂದು ಗೊತ್ತಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ5 :** ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ, ನಂತರ ಪೊಲೀಸರು ಬಂದು ಮಹಜರು ಮಾಡಿ ಗ್ರಾಮ ಪಂಚಾಯಿತಿ ಸೀಲುಗಳು , ಅಧ್ಯಕ್ಷರ ಹೆಸರಿನಲ್ಲಿರುವ ಎರಡು ಸೀಲು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ರವರ ಹೆಸರಿನಲ್ಲಿ ಇರುವ **2** ಸೀಲುಗಳುನ್ನು ಅಮಾನತುಪಡಿಸಿಕೊಂಡರು. ನಂತರ ದಾಖಲಾತಿಗಳನ್ನು ಪೊಲೀಸರು ಸೀಜ್ ಮಾಡಿರುತ್ತಾರೆ. **100** ರೂ. ಬಾಂಡ್ ಪೇಪರಿನ ತಪ್ಪೊಪ್ಪಿಗೆ ಪತ್ರವನ್ನು ಪಡೆದುಕೊಂಡಿರುತ್ತಾರೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ6 :**ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ, ದಿನಾಂಕಃ **01-10-2009** ರಂದು ಸದರಿ ಸಾಕ್ಷಿಯು ಪಿರ್ಯಾದಿ ಕೊಟ್ಟಿರುವುದಾಗಿಯೂ ಹಾಗೂ **3** ದಿನ ಬಿಟ್ಟು ಪೊಲೀಸರು ಸ್ಥಳ ಮಹಜರು ಮಾಡಲು ಬಂದಿದ್ದರು. ನಂತರ ಸುಮಾರು ಒಂದು ತಿಂಗಳ ನಂತರ ಒಂದು ಅಮಾನತು ಮಹಜರನ್ನು ಪೊಲೀಸರು ಬರೆದಿದ್ದು

ರಶೀದಿ ಪುಸ್ತಕಗಳು, ಪಂಚಾಯಿತಿ ನಿರ್ಣಯ ಪುಸ್ತಕಗಳು, ಪಲಾನುಭವಿಗಳ ಪಟ್ಟಿಯ ವಿವರ, ಎಲ್ಲಾ ಫಲಾನುಭವಿಗಳ ಪಟ್ಟಿಯ ಪುಸ್ತಕ ಇದನ್ನು ಅವ ಸಮಕ್ಷಮ ಸ್ವಾಧೀನಪಡಿಸಿಕೊಂಡಿದ್ದಾರೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಆ.1

**ಪ್ರಶ್ನೆ:7** : ಸದರಿಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ, ಸದರಿ ಸಾಕ್ಷಿ ಅಮಾನತು ಮಹಜರು ನಿಪಿ-2 ಅವರ ಸಹಿ ನಿಪಿ-2 ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ಬಂದು ಅವರ ಹಸ್ತಾಕ್ಷರ ಇರುವ ಪುಸ್ತಕಗಳನ್ನು ಕೇಳಿದ್ದು ಆ ಬಗ್ಗೆ ಅವರು ಒಂದು ಪುಸ್ತಕವನ್ನು ಪೊಲೀಸರಿಗೆ ಕೊಟ್ಟಿರುವುದಾಗಿಯೂ ಹಾಗೂ ಈ ಬಗ್ಗೆ ಮಹಜರು ಮಾಡಿರುವುದಾಗಿಯೂ ಹಾಗೂ ಈಗ ಅವರಿಗೆ ತೋರಿಸಿದ ಗ್ರಾಮ ಪಂಚಾಯಿತಿ ನಿರ್ಣಯ ಪುಸ್ತಕ ನಿಪಿ-3 ಗ್ರಾಮ ಪಂಚಾಯಿತಿ ಪರವಾನಗಿ ಪುಸ್ತಕ ನಿಪಿ 4, ಆಶ್ರಯ ಯೋಜನ ವಸತಿ ಯೋಜನೆಯ ಚೆಕ್ಕು ವಿತರಣೆ ವಹಿ ನಿಪಿ-5, ಇಂದಿರಾ ಅವಾಸ್ ಯೋಜನೆ ವಸತಿ ಫಲಾನುಭವಿಗಳ ಚೆಕ್ಕು ವಿತರಣೆ ವಹಿ ನಿಪಿ6, ಇಂದಿರಾ ಅವಾಸ್ ಯೋಜನೆ ವಸತಿ ಫಲಾನುಭವಿಗಳ ಪುಸ್ತಕ ನಿಪಿ7, ಇಂದಿರಾ ಅವಾಸ್ ಯೋಜನೆ ವಸತಿಫಲಾನುಭವಿಗಳ ಚೆಕ್ಕು ವಿತರಣೆ ವಹಿ ನಿಪಿ-8 ಆಶ್ರಯ ಯೋಜನೆ 2006-7 ನೇ ಡಿಸಿ ಬಿಲ್ಲು ವಹಿ ನಿಪಿ-9, ಆಶ್ರಯ ಯೋಜನ ಚೆಕ್ಕು ವಿತರಣೆ ವಹಿ 2006-7 ನಿ-10 ಶೌಚಾಲಯ ನಿರ್ಮಲ ಗ್ರಾಮ ಯೋಜನೆಯ 2000-2001 ರ ದಾಸ್ತನು ವಿತರಣೆ ಮಾಹಿತಿ ಪುಸ್ತಕ ನಿಪಿ-11, ನಿರ್ಮಲ ಗ್ರಾಮ ಯೋಜನೆ ನಗದು ವಹಿ ನಿಪಿ-12, ಸಾದಿಲ್ವ ನಿದಿ-1 ಸಾದಿಲ್ವ ವಹಿ ನಿಪಿ-13, ಆಶ್ರಯ ಯೋಜನೆ ಫಲಾನುಭವಿಯ ವಿವರ ಪುಸ್ತಕ ನಿಪಿ-14, ನಿದಿ1 ಸಾಮಾನ್ಯ ನಗದು ವಹಿ 2008-9 ಪುಸ್ತಕ ನಿಪಿ-15, 12 ನೆ ಹಣಕಾಸು ಯೋಜನೆ ನಗದು ವಹಿ ನಿಪಿ-16, ಡಾ.ಅಂಬೇಡ್ಕರ್ ಯೋಜನೆ ಚೆಕ್ಕು ವಿವರ ನಿಪಿ-17, ನರೆಗೆ ನಗದು ವಹಿ ನಿಪಿ-18, ಡಾ.ಅಂಬೇಡ್ಕರ್ ಯೋಜನೆ ಚೆಕ್ಕು ವಿವರಣೆ ಮಾಹಿತಿ ನಿಪಿ-19, ನಿದಿ 2 ಸಾಮಾನ್ಯ ನಗದು ವಹಿ ನಿಪಿ-20, ನಿದಿ 2 ಸಾದಿಲ್ವಾರು ವಹಿ ನಿಪಿ 21, ನಿದಿ 2 2008-9 ಸಾಮಾನ್ಯ ನಗದು ವಹಿ ನಿಪಿ-22, ಸಿಬ್ಬಂದಿ ವೇತನ ವಹಿ 2006 ರಿಂದ 2008-9 ನಿಪಿ-23, ಸದಸ್ಯರ ಸಭಾಭತ್ಯೆ ತಪ್ತಿ ನಿಪಿ-24, ಮಳಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಯ ವೇತನ ಬಟವಾಡೆ ತಖ್ತೆಯೆ ನಿಪಿ-25, ತೆರಿಗೆ ವಸುಲಾತಿ ರಶೀದಿ ಪುಸ್ತಕ ನಿಪಿ-26, ಸಾಮಾನ್ಯ ನಗದು ವಹಿ ನಿಪಿ-27, ನಿದಿ2 ಮಳಲಿ ಪಂಚಾಯಿತ್ ಜಮಾ ವಹಿ ನಿಪಿ-28, ಕಟ್ಟಡ ಪರವಾನಗಿ ಪುಸ್ತಕ ನಿಪಿ-29, ಅಳತೆ ಪುಸ್ತಕ ನಿದಿ 2 ನಿಪಿ 30, ಕಂದಾಯ ರಶೀದಿ 2009-10 ನಿಪಿ-31, 2008-09 ನಿಪಿ-32, ಕಂದಾಯ ರಸೀದಿ ಪುಸ್ತಕ 2007-08 ನಿಪಿ-33, ಮೆಶರ್ ಮೆಂಟ್

ಪುಸ್ತಕಗಳು **3** ಹಾಜರುಪಡಿಸಿದ್ದು ನಿಪಿ **34** ರಿಂದ **36,** ನಿದಿ**1** ಪುಸ್ತಕ ನಿಪಿ**37,** ಅವರ ಹಸ್ತಾಕ್ಷರದಲ್ಲಿ ಪೊಲೀಸರು ಬರೆಸಿಕೊಂಡ ಮಾದರಿ ಬವಣಿಗೆಗಳು ನೋಡಿ ಗುರುತಿಸಿದ್ದು ನಿಪಿ-**38** ರಿಂದ **47,** ಅವರ ಹಸ್ತಾಕ್ಷರದಲ್ಲಿ ಪೊಲೀಸರು ಬರೆಸಿಕೊಂಡ **1** ರಿಂದ **190** ರ ವರೆಗಿನ ಅಂಕಿ ಬರವಣಿಗೆ ನಿಪಿ- **48** ರಿಂದ **57** ಎಂದು ಗುರುತಿಸಲಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಆ.**1**

**ಪ್ರಶ್ನೆಃ8 :** ಸದರಿಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ಲೆಕ್ಕ ಪರಿಶೋಧನ ವರದಿ ನಿಪಿ-**58** ಎಂದು ಗುರುತಿಸಲಾಯಿತು. ಆಶ್ರಯ ಯೋಜನ ಅಂಬೇಡ್ಕರ್ ಯೋಜನೆ**,** ಇಂದಿರಾ ಯೋಜನೆಯಡಿಯಲ್ಲಿ ನಿಧಿ ಪುಸ್ತಕ **1,2, 3** ರ ಅಡಿಯಲ್ಲಿ ಇರುವ ಚೆಕ್ಕುಗಳನ್ನು ಅವರು ಹಾಜರುಪಡಿಸಿದ್ದು ಎಸ್ ಬಿ ಎಂ ಬ್ಯಾಂಕಿನ ಖಾತೆ ನಂ**. 64002236278** ನ **139** ಚೆಕ್ಕುಗಳನ್ನು ನಿಪಿ **59** ರಿಂದ **198** ಎಂದು ಗುರುತಿಸಲಾಯಿತು. ಎಸ್ ಬಿ ಎಂ ಬ್ಯಾಂಕಿನ ಖಾತೆ ನಂ**. 64006864196** ನ **55** ಚೆಕ್ಕುಗಳು **199** ರಿಂದ **253** ಎಂದು ಗುರುತಿಸಲಾಯಿತು. ಮಾದರಿ ಸಹಿ ಪಡೆದ **14-05-2009** ರಂದು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಂದ ಪಡೆದ ಮಾದರಿ ಸಹಿಯ ಮೂಲ ಪ್ರತಿ ನಿಪಿ-**254** ಎಂದು ಗುರುತಿಸಲಾಯಿತು. ಒಂದು ಗಾಡ್ರೆಜ್ ಬಿರೂವಿನ ಕೀ ಮತ್ತು ಡೋರಿಗೆ ಹಾಕುವ ಬೀಗದ ಕೀ ಎಂಒ-**1** ಮತ್ತು **2** ಎಂದು ಗುರುತಿಸಲಾಯಿತು**.** ಪಿ ಪಿ ಮೋಹನ್ ರಾಜ್ ರವರು ಬರೆದುಕೊಟ್ಟ **100** ರೂ.ವಿನ ಒಂದು ಬಾಂಡ್ ಪೇಪರ್ ನಿಪಿ-**255** ಎಂದು ಗುರುತಿಸಲಾಯಿತು. ಸೀಲು ಮಾಡಿದ ಒಂದು ಖಾಕಿ ಕವರ್ ಇದ್ದು ಅದರಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ **4** ಸೀಲುಗಳು ಇದ್ದು ಅದನು ಎಂ ಒ **3** ರಿಂದ **6** ಎಂದು ಗುರುತಿಸಲಾಯಿತು. ಐ ಡಿ ಎಂ ಅಕ್ಷರದಿಂದ ಸೀಲು ಮಾಡಿದ ಒಂದು ಕವರು ಇದ್ದು ಅದರಲ್ಲಿ ಕಾರ್ಪೋರೇಶನ್ ಬ್ಯಾಂಕಿಗೆ ಸೇರಿದ ಒಂದು ಲೇಟರ್ ನಿಪಿ-**356** ಎಂದು ಗುರುತಿಸಲಾಯಿತು. ಖಾತ ನಂ**. 14115** ಇದರ ಮಾದರಿ ಸಹಿಯನ್ನು ಕಾರ್ಯ ನಿರ್ವಾಹಕ ಅಧಿಕಾರಿಗಳು ದೃಡೀಕರಿಸಿದ ಪತ್ರ ನಿಪಿ- **257** ಎಂದು ಗುರುತಿಸಲಾಯಿತು. ಎಸ್ ಬಿ **13657** ಖಾತೆಯ ಗಣೇಶರವರ ಮಾದರಿ ಕಾರ್ಡು ಸಹಿ ನಿಪಿ-**258** ಎಂದು ಗುರುತಿಸಲಾಯಿತು. ಅವರ ಸಹಿಯ ಮಾದರಿ ಕಾರ್ಡು ನಿಪಿ-**259** ಎಂದು ಗುರುತಿಸಲಾಯಿತು**.** ಅವರ ಮಾದರಿ ಸಹಿಯ ಕಾರ್ಡು ನಿಪಿ-**260** ಎಂದು ಗುರುತಿಸಲಾಯಿತು**.** ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ನಿಯೋಜಿಸಿ ಹೆಚ್ಚುವರಿ ಪ್ರಭಾರದಲ್ಲಿ ನಿಯೋಜಿಸಲು ಪತ್ರ ನಿಪಿ**261** ಎಂದು ಗುರುತಿಸಲಾಯಿತು**.** ಸದರಿ ಪತ್ರದ ಪ್ರಕಾರ ಅವರನ್ನು ಹೆಚ್ ಕೆ ಮುದ್ದಯ್ಯ ರವರು ಹೆಚ್ಚುವರಿ ಪ್ರಭಾರದಲ್ಲಿ ಅದೇಶಿಸಿದ**.** ಗ್ರಾಮ ಪಂಚಾಯಿತಿ ಮಳಲಿ ಇವರು ದೃಡೀಕರಿಸಿ ಕೊಟ್ಟ ಪತ್ರ ನಿಪಿ **263**

ಎಂದು ಗುರುತಿಸಲಾಯಿತು. ಕಾರ್ಪೋರೇಶನ್ ಬ್ಯಾಂಕಿನ ಖಾತೆ ನಂ. ಎಸ್ ಬಿ **01/10524** ಗೆ ಸೇರಿದ **13** ಚೆಕ್ಕುಗಳು ನಿಪಿ-**263** ರಿಂದ **275** ಎಂದು ಗುರುತಿಸಲಾಯಿತು. ಕಾರ್ಪೋರೇಶನ್ ಬ್ಯಾಂಕಿನ ಖಾತೆ ನಂ. ಎಸ್.ಬಿ **01/14115** ಗೆ ಸೇರಿದ **27** ಚೆಕ್ಕುಗಳು ನಿಪಿ- **276** ರಿಂದ **302.** ಕಾರ್ಪೋರೇಶನ್ ಬ್ಯಾಂಕಿನ ಖಾತೆ ನಂ. ಎಸ್.ಬಿ. **01/13657** ಸೇರಿದ **7** ಚೆಕ್ಕು ನಿಪಿ-**303** ರಿಂದ **309** ಎಂದು ಗುರುತಿಸಲಾಯಿತು. ಗಣೇಶ ಮತ್ತು ಸಿದ್ದಬಸವೇಗೌಡ ಅಂದರೆ ಅವ ಮಾದರಿ ಬರವಣಿಗೆ ಪುಸ್ತಕ ನಿಪಿ-**310** ಎಂದು ಗುರುತಿಸಲಾಯಿತು. ಚಾಸ-**2** ರವರು ಮೃತರಾದ್ದಾರೆ. ಅವರ ಸಹಿಗಳನ್ನು ನೋಡಿ ಗುರುತಿಸಿರುತ್ತೇನೇ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಆ.**1**

**ಪ್ರಶ್ನೆ:9 :** ಅ ಸಾ **2** ಲಕ್ಷ್ಮಣಶೆಟ್ಟಿ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** 2008 ರಿಂದ ನಾನು **2010** ನೇ ಸಾಲಿನಲ್ಲ ಮಳಲಿ ಗ್ರಾಮಪಂಚಾಯಿತಿಯ ಕಾರ್ಯದರ್ಶಿಯವರು ಅಧ್ಯಯಕ್ಷನಾಗಿದ್ದೆ**,** ಕಾರ್ಯದರ್ಶಿಯಾಗಿ ಗಣೇಶ ಮತ್ತು ಸಿದ್ದಬಸವೇಗೌಡರು ಇದ್ದರು**,** ಆರೋಪಿಯು ಬಿಲ್ ಕಲೆಕ್ಟರ್ ಆಗಿದ್ದರು**.** ಸದರಿ ಮೋಹನ್ ರಾಜನನು ಪಂಚಾಯಿತಿಗೆ ಬಂದು ಹೋಗುತ್ತಿದ್ದ ಕರ ವಸೂಲು ಮಾಡುವ ಕೆಲಸ ಅವನಿಗೆ ವಹಿಸಿದ್ದು ಕಾರ್ಯದರ್ಶಿಯವರ ಡ್ರಾಯರ್ನಿಂದ ಆರೋಪಿಯಾದ ನೀವು ಚಿಕ್ಕನ್ನು ಕದ್ದು ನಕಲಿ ಸಹಿ ಮಾಡಿ ಹಣ ಡ್ರಾ ಮಾಡಿರುವಿರಿ ಎಂದು ನಂತರ ಅವರಿಗೆ ತಿಳಿಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಆ.**1**

**ಪ್ರಶ್ನೆ:10 :** ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಸೀಲನ್ನು ಕಾರ್ಯದರ್ಶಿಯವರ ಡ್ರಾಯರಿನಿಂದ ಪಡೆದು ಆರೋಪಿಯಾದ ನೀವು ಸಹಿ ಮಾಡುತ್ತಿದ್ದು ಸಕಲೇಶಪುರದ ಎಸ್ ಬಿ ಐ ಮತ್ತು ಕಾರ್ಪೋರೇನಶ್ ಬ್ಯಾಂಕಿನ ಚಿಕ್ಕುಗಳನ್ನು ಆರೋಪಿಯಾದ ನೀವು ದುರುಪಯೋಗಪಡಿಸಿಕೊಂಡು ನಂತರ ಗಣೇಶರವರು ವರ್ಗಾವಣೆ ಆದ ನಂತರ ಚಾ ಸಾ **1** ರವರು ಬಂದಿದ್ದು ಅವರ ಅವಧಿಯಲ್ಲಿ ಆರೋಪಿಯಾದ ನೀವು ಈ ಹಿಂದೆ ಸದರಿ ಸಾಕ್ಷಿಯ ಮತ್ತು ಕಾರ್ಯದರ್ಶಿಯ ನಕಲು ಸಹಿ ಮಾಡಿ ಬ್ಯಾಂಕಿಗೆ ವಂಚಿಸಿದ್ದು ಕಂಡು ಬಂತು**,** ಆರೋಪಿಯಾದ ನೀವು ಹಣ ತೆಗೆದ ಬಗ್ಗೆ ಅವರಿಗೆ ಯಾವುದೇ ಸೂಚನೆ ಇರಲಿಲ್ಲ ಬ್ಯಾಂಕಿನ ಖಾತೆಯಲ್ಲಿ ಅವರಿಗೆ ಪ್ರತಿ ತಿಂಗಳು ಟ್ಯಾಲಿ ಆಗುತ್ತಿದ್ದು ಈ ಬಗ್ಗೆ

ಅವರಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ 11 :** ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ, ನಂತರ ಚಾಸ-**1** ರವರು ಈ ಬಗ್ಗೆ ಪೊಲೀಸರಿಗೆ ದೂರು ಕೊಟ್ಟರು. ಆರೋಪಿಯಾದ ನೀವು ಸದರಿ ಸಾಕ್ಷಿಯ ಮತ್ತು ಕಾರ್ಯದರ್ಶಿಯವರ ಸಹಿ ಕೊಟ್ಟಿ ಮಾಡಿ ಬ್ಯಾಂಕಿನಿಂದ ಹಣ ಡ್ರಾ ಮಾಡಿ ದುರುಪಯೋಗ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದಾನೆ. ಸಾಕ್ಷಿಗೆ ನಿಪಿ-**199** ರಿಂದ **253** ಎಂದು ಗುರುತಿಸಲಾದ ಚಿಕ್ಕುಗಳನ್ನು ತೋರಿಸಲಾಗಿ ನಿಪಿ-**209, 210, 220** ರ ಸಹಿಗಳನ್ನು ಬಿಟ್ಟು ಅದರಲ್ಲಿ ಇರುವ ಯಾವುದೇ ಸಹಿ ಅವರದಲ್ಲ. ನಿಪಿ **209** ರಲ್ಲಿ ಇರುವ ಸಹಿ ನಿಪಿ-**209**(ಎ) , ನಿಪಿ-**210**(ಎ) , ನಿಪಿ-**220**(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿಯು ನಿಪಿ-**59, 60, 61, 62, 63, 103, 149, 150, 180, 182, 192, 193, 194, 195** ರಲ್ಲಿಇರುವ ಅವರ ಸಹಿಗಳಾಗಿದ್ದು ಬಿಟ್ಟು ಅದರಲ್ಲಿ ಇರುವ ಯಾವುದೇ ಸಹಿ ಅವರದಲ್ಲ. ಸಾಕ್ಷಿಯು ಸಹಿಗಳನ್ನು ನಿಪಿ--**59**ಎ ನಿಪಿ-**60**ಎ, ನಿಪಿ-**61**ಎ, ನಿಪಿ-**62**ಎ, ನಿಪಿ-**63**ಎ, ನಿಪಿ-**103**ಎ , ನಿಪಿ-**149**ಎ, ನಿಪಿ-**150**ಎ ನಿಪಿ-**180**ಎ, ನಿಪಿ-**182**ಎ ನಿಪಿ-**192**ಎ, ನಿಪಿ-**193**ಎ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ,, ನಿಪಿ-**194**ಎ , ನಿಪಿ-**195**ಎ ಎಂದು ಗುರುತಿಲಸಾಯಿತು. ಈ ನಂಬರಿನ ಚಿಕ್ಕುಗಳನ್ನು ಬಿಟ್ಟು ಬೇರೆ ಯಾವುದೇ ಸಹಿಗಳು ಅವರದಲ್ಲ, ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ12 :**ಅ ಸಾ **3** ಮರಿಯಮ್ಮ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ, **2008** ರಿಂದ ಅವರು ಎರಡುವರೆ ವರ್ಷ ಮಳಲಿ ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷೆ ಆಗಿ ಇದ್ದೆ. ಆ ಸಮಯದಲ್ಲಿ ಕಾರ್ಯದರ್ಶಿಆಗಿ ಕಲವು ದಿನ ಗಣೇಶ ಮತ್ತು ಸಿದ್ದಬಸನೇಗೌಡ ಕೆಲಸ ಮಾಡಿದ್ದರು. ಮೋಹನ್ ರಾಜ ಬಿಲ್ ಕಲೆಕ್ಟರ್ ಆಗಿ ಇದ್ದರು. ಮೋಹನ್ ರಾಜ್ ಎಲ್ಲಾರ ವಿಶ್ವಾಸ ಗಳಿಸಿದ್ದನು, ಅವನು ಯಾರಿಗು ಗೊತ್ತಾಗದಂತೆ ಪಂಚಾಯಿತಿಯಲ್ಲಿ ಪೋರ್ಜರಿ ಸಹಿ ಮಾಡಿಸಿ ದುಡ್ಡೆಲ್ಲಾ ತೆಗೆದುಕೊಂಡಿದ್ದನು. ಆತನು ಚಿಕ್ಕಿನಲ್ಲಿ ಖೊಟ್ಟಿ ಮಾಡಿದ್ದನು. ನಂತರ ಆತನು ಖೊಟ್ಟಿ ಮಾಡಿದ ವಿಶಯ ಗೊತ್ತಾಯಿತು. ಸದರಿ ಸಾಕ್ಷಿಯು ಅಧ್ಯಕ್ಷರಾಗಿದ್ದ

ಸಮಯದಲ್ಲಿ ಖೊಟ್ಟಿ ಮಾಡಿ ಅವ ಸಹಿ ಮಾಡಿದ್ದಾರೆ. ಆರೋಪಿಯಾದ ನೀವೇ ಸೀಲು ಮಾಡಿಸಿಕೊಂಡು ಇಟ್ಟಿಕೊಂಡಿದ್ದು ಅದನ್ನು ಉಪಯೋಗಿಸಿ ಖೊಟ್ಟಿ ಮಾಡುತ್ತಿದ್ದ. ಎಲ್ಲಾ ಬಿರುವಿನ ಕೀ ಆರೋಪಿಯಾದ ನಿಮ್ಮ ವಶದಲ್ಲಿ ಇದ್ದು ನೀವು ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದು ರೂ.14,38,000/- ಸಾವಿರಗಳನ್ನು ಆರೋಪಿಯಾದ ನೀವು ಬೇರೆ ಬೇರೆ ಹೆಸರಿನಲ್ಲಿ ತೆಗೆದುಕೊಂಡು ಮೋಸ ಮಾಡಿದ್ದು ಈ ಹಣ ಕಾಮಗಾರಿಗೆ ಮನೆಗೆ ಮತ್ತು ಸಂಬಳಕ್ಕೆ ಬಂದ ಹಣ ಆಗಿತ್ತು. ಸದರಿ ಹಣವನ್ನು ಆರೋಪಿಯಾದ ನೀವು ನಿಮ್ಮ ಮನೆ ಕಟ್ಟಿಸಲು ಮತ್ತು ಊರ ಬಿಟ್ಟು ಹೋಗಲು ತಯಾರಿ ನಡೆಸಿದ್ದು , ಈ ಬಗ್ಗೆ ಸದರಿ ಸಾಕ್ಷಿಗೆ ಗೊತ್ತಾಗಿ ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುವುದಾಗಿಯೂ ಮತ್ತು ಸದರಿ ಸಾಕ್ಷಿಯು ಅವರ ಹೇಳಿಕೆಯನ್ನು ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆ:13** :ಅ ಸಾ 4 ನಟರಾಜ ಟಿ.ವಿ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ,ಅವರನ್ನು ಸ್ಟೇಟ್ ಅಕೌಂಟ್ ಅಂಡ್ ಅಡಿಟ್ ಡಿಪಾರ್ಟ್ ಮೆಂಟ್ ನಿಂದ ಅವರು ಮೂಲತಃ ನೇಮಕಗೊಂಡಿದ್ದು, ನಂತರ ಸ್ಥಳಿಯವಾಗಿ ಸಹಾಯ ನಿಯಂತ್ರಕರ ಕಚೇರಿ ಸ್ಥಳಿಯ ಲೆಕ್ಕ ಪರಿಶೋಧನ ವರ್ತುಲ ಹಾಸನ ಇವರ ಆದೇಶದ ಪ್ರಕಾರ ಅವರನ್ನು ಮಳಲಿ ಗ್ರಾಮ ಪಂಚಾಯಿತಿಯ 2008-09 ಮತ್ತು 2009-10 ನೇ ಸಾಲಿನ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಿ ವರದಿ ಕೊಡುವಂತೆ ನೇಮಿಸಲಾಗಿತ್ತು. ಅವರ ಜೊತೆ ಚಾಸಾ6 ರಾಮಚಂದ್ರರವರನ್ನು ನೇಮಿಸಿದ್ದಾರೆ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆ:14** : ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ, ದಿನಾಂಕಃ 22-06-2010 ರಿಂದ 29-06-2010 ರವರೆಗೆ ಅವರು ಆಡಿಟ್ ಮಾಡಿದ್ದು ಕೆಲವು ವೋಚರ್ ಕೊಡಿಸಲಿಲ್ಲ ಹಾಜರುಪಡಿಸಲಿಲ್ಲ ಎಂದು ವರದಿ ಮಾಡಿರುವುದಾಗಿಯೂ ಹಾಗೂ ಆರ್ಥಿಕ ಲೋಪದೋಷಗಳು ಕಂಡು ಬಂದಿದೆ ಮತ್ತು ಕಾರ್ಯ ವೈಕರ್ಯಗಳಲ್ಲಿ ಲೋಪದೋಷಗಳು ಕಂಡು ಬಂದಿದೆ. ಅದನ್ನು ವಿಸ್ತಾರವಾಗಿ ಆಗಿ ತನಿಖಾ ವರದಿಯಲ್ಲಿ ಕೊಟ್ಟಿರುವುದಾಗಿಯೂ ಹಾಗೂ ಮೇಲ್ನೋಟಕ್ಕೆ ಹಣದ ಆರ್ಥಿಕ ದುರುಪಯೋಗ ಆ ಸಮಯದಲ್ಲಿ ಇದ್ದ ಬಿಲ್ ಕಲೆಕ್ಟರ್ ಮೋಹನ್ ಇವರು ಹಣ ದುರುಪಯೋಗ ಮಾಡಿದ್ದು ಕಂಡು ಬಂದಿದ್ದು ಈ ಬಗ್ಗೆ ಅವರು ಸಂಪೂರ್ಣ ವರದಿ ಕೊಟ್ಟಿರುವುದಾಗಿಯೂ ಹಾಗೂ ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಕಾಗಿಯೂ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ
ಆ.1

**ಪ್ರಶ್ನೆ:15 :** ಅ ಸಾ **5** ಧರ್ಮ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ಅವರು ಸಕಲೇಶಪುರದ ಮಳಲಿ ಗ್ರಾಮದಲ್ಲಿ ವಾಸವಾಗಿದ್ದು ಸುಮಾರು **7** ರಿಂದ **8** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪೋಲೀಸರು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ರಾಬರಿಯಾದ ಬಗ್ಗೆ ಪಂಚನಾಮೆ ಬರೆದು ಅವರ ಸಹಿ ಪಡೆದಿರುತ್ತಾರೆ**.** ಸಾಕ್ಷಿಯು ಪಂಚನಾಮೆಯಲ್ಲಿನ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**–311** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ**–311** ಎ ಎಂದು ಗುರುತಿಸಲಾಯಿತು**.** ಪಂಚನಾಮೆ ಸಮಯದಲ್ಲಿ ಚಾ ಸಾ **9** ಮತ್ತು **10** ರವರು ಹಾಜರಿದ್ದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ**.** ಅದಕ್ಕೆ ನೀವೇನು ಹೇಳುತ್ತೀರಿ**?**
ಉತ್ತರಃ
ಆ.1

**ಪ್ರಶ್ನೆ:16 :** ಅ ಸಾ **6** ಶೇಖರ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ಅವರು ಸಕಲೇಶಪುರದ ಮಳಲಿ ಗ್ರಾಮದಲ್ಲಿ ವಾಸವಾಗಿದ್ದು ಸುಮಾರು **7–8** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪೋಲೀಸರು ಅವರನ್ನು ಕರೆಸಿ ಗ್ರಾಮ ಪಂಚಾಯಿತಿ ಕಛೇರಿಯ ಹೊರಗಡೆ ಅವರ ಸಹಿಯನ್ನು ಪಡೆದಿರುತ್ತಾರೆ**.** ಸಾಕ್ಷಿ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ**–311** ಎಂದು ಗುರುತಿಸಲಾಗಿದ್ದು**,** ಸಾಕ್ಷಿಯ ಸಹಿಯನ್ನು ನಿಪಿ**–311**(ಬಿ) ಎಂದು ಗುರುತಿಸಲಾಯಿತು ಹಾಗೂ ಪಂಚನಾಮೆ ಸಮಯದಲ್ಲಿ ಚಾ ಸಾ **8** ಮತ್ತು **10** ರವರು ಹಾಜರಿದ್ದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ**.** ಅದಕ್ಕೆ ನೀವೇನು ಹೇಳುತ್ತೀರಿ**?**
ಉತ್ತರಃ
ಆ.1

**ಪ್ರಶ್ನೆ:17 :**ಅ ಸಾ **7** ಪಾಪಣ್ಣ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ಅವರು ಸಕಲೇಶಪುರದ ಮಳಲಿ ಗ್ರಾಮದಲ್ಲಿ ವಾಸವಾಗಿದ್ದು ಸುಮಾರು **7–8** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪೋಲೀಸರು ಅವರನ್ನು ಕರೆಸಿ ಗ್ರಾಮ ಪಂಚಾಯಿತಿ ಕಛೇರಿಯ ಹೊರಗಡೆ ಅವರ ಸಹಿಯನ್ನು ಪಡೆದಿರುತ್ತಾರೆ**.** ಸಾಕ್ಷಿ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ**–311** ಎಂದು ಗುರುತಿಸಲಾಗಿದ್ದು**,** ಸಾಕ್ಷಿಯ ಸಹಿಯನ್ನು ನಿಪಿ**–311**(ಸಿ) ಎಂದು

ಗುರುತಿಸಲಾಯಿತು ಹಾಗೂ ಪಂಚನಾಮೆ ಸಮಯದಲ್ಲಿ ಚಾ ಸಾ **8** ಮತ್ತು **9** ರವರು ಹಾಜರಿದ್ದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**
ಉತ್ತರಃ
ಆ.**1**

**ಪ್ರಶ್ನೆಃ18 :**ಆ ಸಾ **10** ಜಾನ್ ಪೀಟರ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ **2008-09** ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಅವರಿಗೆ ಮನೆ ಮಂಜೂರಾಗಿತ್ತು**.** ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸದರಿ ವಿಷಯವನ್ನು ಅವರಿಗೆ ತಿಳಿಸಿ**,** ರೂ**. 10** ಸಾವಿರಕ್ಕೆ ಚೆಕ್ಕನ್ನು ನೀಡಿ ಅದನ್ನು ಬ್ಯಾಂಕ್ ನಲ್ಲಿ ತೆಗೆದುಕೊ ಎಂದು ಹೇಳಿದರು **:** ಸದರಿ ಸಮಯದಲ್ಲಿ ಮೋಹನ್ ರಾಜ್ ಎಂಬಾತ ಪಂಚಾಯ್ತಿಯ ಕರ ವಸೂಲಿಗಾರನಾಗಿ ಕೆಲಸ ಮಾಡುತ್ತಿದ್ದು**,** ಅವರು ಆತನ ಮೇಲೆ ನಂಬಿಕ **'**ಇಟ್ಟು ಸದರಿ ಚೆಕ್ಕನ್ನು ಆತನಿಗೆ ಬ್ಯಾಂಕ್ ನಿಂದ ಹಣ ಪಡೆದುಕೊಂಡು ತಂದು ಅವರಿಗೆ ಕೊಡಲು ನೀಡಿದ್ದು ಆದರೆ ಅವರು ಆತನಿಗೆ ಇದುವರೆಗೂ ಯಾವುದೇ ಹಣ ನೀಡಿಲ್ಲ**.** ನಂತರ ಆರೋಪಿಯು ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿಗಳನ್ನು ಖೊಟ್ಟಿ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ**.** ಅದಕ್ಕೆ ನೀವೇನು ಹೇಳುತ್ತೀರಿ**?**
ಉತ್ತರಃ
ಆ.**1**

**ಪ್ರಶ್ನೆಃ19 :**ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ನಂತರ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ವಿಚಾರಿಸಿದಾಗ**,** ನೀವು ನಿಮ್ಮ ತಪ್ಪನ್ನು ಒಪ್ಪಿಕೊಂಡು ಸದರಿಯವರ ಸಹಿ ಮತ್ತು ಸೀಲನ್ನು ನೀವೇ ಹಾಕಿ ಹಣವನ್ನು ಡ್ರಾ ಮಾಡಿರುವುದು ನಿಜ ಎಂದು ಒಪ್ಪಿಕೊಂಡಿದ್ದು ಆರೋಪಿಯಾ ಇದೇ ರೀತಿ ಸುಮಾರು **3-4** ಜನರಿಗೆ ವಂಚಿಸಿ**,** ನಂಬಿಸಿ ಮೋಸ ಮಾಡಿರುವುದು ತಿಳಿಯಿತು**.** ಆರೋಪಿಯಾದ ನಿಮ್ಮನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ**.** ಅದಕ್ಕೆ ನೀವೇನು ಹೇಳುತ್ತೀರಿ**?**
ಉತ್ತರಃ
ಆ.**1**

**ಪ್ರಶ್ನೆಃ20 :** ಅ ಸಾ **18** ಸಂತೋಷ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಸದರಿ ಸಾಕ್ಷಿಯು **2007** ರಿಂದ **2010** ರ ವರೆಗೂ ಕಂಪ್ಯೂಟರ್ ಆಪರೇಟರ್ ಆಗಿ

ಹಾಗೂ **2010** ರಿಂದ ಇಲ್ಲಿಯವರೆಗೂ ಬಿಲ್ ಕಲೆಕ್ಟರ್ ಆಗಿ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡಿಕೊಂಡಿದ್ದು ಚಾಸಾ **31** ರಿಂದ **37** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು ಅವರ ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010** ನೇ ಸಾಲಿನವರಗೊ ಲಕ್ಷಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು. ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ ಬ್ಯಾಂಕಿನ ವ್ಯವಹಾರವನ್ನು ಕಾರ್ಯದರ್ಶಿಯು ನೋಡಿಕೊಳ್ಳುತ್ತಿದ್ದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಆ**.1**

**ಪ್ರಶ್ನೆ:21 :** ಅ ಸಾ **21** ಶುಭಮಂಗಳ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ **2001** ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಅವರಿಗೆ ಮನೆ ಮಂಜೂರಾಗಿತ್ತು**,** ಅವರ ಕುರಿತಂತೆ ಅವರಿಗೆ ರೂ**. 25** ಸಾವಿರ ಮಾಂಜೂರಾಗಿರುತ್ತದೆ ಎಂದು ಅವರ ಗಂಡ ಅವರಿಗೆ ತಿಳಿಸಿದರು. ಅದರಲ್ಲಿ ರೂ**. 5** ಸಾವಿರ ಮಾತ್ರ ಅವರಿಗೆ ಬಂದಿರುತ್ತದೆ. ಉಳಿದ ಹಣದ ಬಗ್ಗೆ ಅವರ ಗಂಡ ವಿಚಾರಣೆ ಮಾಡಿದಾಗ ಸರ್ಕಾರದಿಂದ ಇನ್ನೂ ಉಳಿದ ಹಣ ಬಂದಿಲ್ಲ ಎಂದು ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾದ ಮೋಹನ್ ರವರು ತಿಳಿಸಿರುತ್ತಾರೆ. ನಂತರ ಮೋಹನ್ ರವರನ್ನು ಅಮಾನತ್ ಮಾಡಿರುತ್ತಾರೆ ಎಂದು ತಿಳಿಯಿತು. ಆರೋಪಿಯಾದ ನಿಮ್ಮನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಆ**.1**

**ಪ್ರಶ್ನೆ:22 :**ಅ ಸಾ **22** ಯೋಗೇಶ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರು ಸುಮಾರು **15** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯನಾಗಿ ಚುನಾಯಿತಗೊಂಡಿದ್ದನು. ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010**ನೇ ಸಾಲಿನವರೆಗೂ ಲಕ್ಷಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು. ಚಾಸಾ **3, 40** ರಿಂದ **45** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ

ಬ್ಯಾಂಕಿನ ವ್ಯವಹಾರವನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೋಡಿಕೊಳ್ಳುತ್ತಿದ್ದ ಕುರಿತು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ23 :**ಅ ಸಾ **23** ಯಶೋಧ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರು ಸುಮಾರು **12** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯಳಾಗಿ ಚುನಾಯಿತಗೊಂಡಿದ್ದು ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010**ನೇ ಸಾಲಿನವರೆಗೂ ಲಕ್ಷ್ಮಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು. ಚಾಸಾ **3, 40** ರಿಂದ **45** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ ಬ್ಯಾಂಕಿನ ವ್ಯವಹಾರವನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೋಡಿಕೊಳ್ಳುತ್ತಿದ್ದ ಕುರಿತು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ24 :**ಅ ಸಾ **24** ಹರೀಶ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರು ಸುಮಾರು **12** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯನಾಗಿ ಚುನಾಯಿತಗೊಂಡಿದ್ದು ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010**ನೇ ಸಾಲಿನವರೆಗೂ ಲಕ್ಷ್ಮಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು. ಚಾಸಾ **3, 40** ರಿಂದ **45** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ ಬ್ಯಾಂಕಿನ ವ್ಯವಹಾರವನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೋಡಿಕೊಳ್ಳುತ್ತಿದ್ದ ಕುರಿತು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆ:25** :ಅ ಸಾ **25** ರಾಜು ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರು ಸುಮಾರು **12** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯನಾಗಿ ಚುನಾಯಿತಗೊಂಡಿದ್ದು ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010**ನೇ ಸಾಲಿನವರೆಗೂ ಲಕ್ಷಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು**.** ಚಾಸಾ **3, 40, 42** ರಿಂದ **45** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು**.** ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ ಬ್ಯಾಂಕಿನ ವ್ಯವಹಾರವನ್ನು ಅಧ್ಯಕ್ಷರು**,** ಕಾರ್ಯದರ್ಶಿ ಮತ್ತು ಆರೋಪಿಯಾದ ನೀವು ನೋಡಿಕೊಳ್ಳುತ್ತಿದ್ದ ಕುರಿತು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಆ**.1**

**ಪ್ರಶ್ನೆ:26** :ಅ ಸಾ **26** ಅಕ್ಕು ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರು ಸುಮಾರು **12** ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯಳಾಗಿ ಚುನಾಯಿತಗೊಂಡಿದ್ದು ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಗ್ರಾಮಪಂಚಾಯ್ತಿಯಲ್ಲಿ **2008** ರಿಂದ **2010**ನೇ ಸಾಲಿನವರೆಗೂ ಲಕ್ಷಣಶೆಟ್ಟಿ ಅಧ್ಯಕ್ಷರಾಗಿ**,** ಮರಿಯಮ್ಮ ಎಂಬುವವರು ಉಪಾಧ್ಯಕ್ಷರಾಗಿ**,** ಗಣೇಶ್ ರವರು ಕಾರ್ಯದರ್ಶಿಯಾಗಿದ್ದರು**.** ಚಾಸಾ **3, 40** ರಿಂದ **45** ರವರೂ ಸಹ ಅವರ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು**.** ಅವರ ಪಂಚಾಯ್ತಿಯಲ್ಲಿ ಆರೋಪಿಯಾದ ನೀವೂ ಸಹ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ಅವರ ಬ್ಯಾಂಕಿನ ವ್ಯವಹಾರವನ್ನು ಅಧ್ಯಕ್ಷರು**,** ಕಾರ್ಯದರ್ಶಿ ಮತ್ತು ಆರೋಪಿಯಾದ ನೀವು ನೋಡಿಕೊಳ್ಳುತ್ತಿದ್ದ ಕುರಿತು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಆ**.1**

**ಪ್ರಶ್ನೆ:27** :ಅ ಸಾ **27** ಜಿ.ಎಸ್.ಪರಮೇಶ್ವರಯ್ಯ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ದಿನಾಂಕ**: 01.10.2009** ರಂದು ಸಂಜೆ **5–00** ಗಂಟೆ ಸಮಯದಲ್ಲಿ ಅವ ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದಿಯು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಅದನ್ನು ಅವರ ಠಾಣಾ ಮೊಕದ್ದಮೆ ಸಂಖ್ಯೆ**. 176/2009** ರಲ್ಲಿ ನೋಂದಾಯಿಸಿಕೊಂಡಿರುತ್ತೇನೆ**.** ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು

ಅದನ್ನು ಈಗಾಗಲೇ ನಿಪಿ**-1** ಎಂದು ಗುರುತಿಸಲಾಯಿತು. ನಂತರ ಅದನ್ನು ಮೇಲಾಧಿಕಾರಿಗಳಿಗೆ ಮತ್ತು ದಂಡಾಧಿಕಾರಿಗಳಿಗೆ ರವಾನಿಸಿರುತ್ತೇನೆ. ಸಾಕ್ಷಿ ಸದರಿ ಎಫ್.ಐ.ಆರ್.ನ್ನು ನೋಡಿ ಗುರುತಿಸಿದ್ದು ನಿಪಿ **-75** ಎಂದು ಸಾಕ್ಷಿದಾರರ ಸಹಿಯನ್ನು ಎಪಿ**-75** ಎ ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ **54** ರವರಿಗೆ ಕೊಟ್ಟಿರುತ್ತೇನೆ. ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ**-1** ಬಿ ಎಂದು ಗುರುತಿಸಲಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.**1**

**ಪ್ರಶ್ನೆಃ28 :**ಅ ಸಾ **28** ಮಲ್ಲಿಕಾರ್ಜುನ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಸದರಿ ಸಾಕ್ಷಿಯು **2019** ನೇ ಇಸವಿಯಿಂದ ಇಲ್ಲಿಯವರೆಗೂ ಸಕಲೇಶಪುರ ನಗರ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕಃ **06.04.2011** ಚಾಸಾ **54** ರವರು ಅವರನ್ನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಪಡೆದುಕೊಂಡು ಬರಲು ನೇಮಿಸಿದ್ದರು ಅದರಂತೆ ನಾನು ದಿನಾರಿಕ**: 07.04.2011** ರಂದು ವರದಿಯನ್ನು ಪಡೆದುಕೊಂಡು ಅದೇ ದಿನ ಸಂಜೆ ಚಾಸಾ.**54** ರವರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ಸೀಲ್ ಮಾಡಲಾಗಿತ್ತು. ಸಾಕ್ಷಿ ಸದರಿ ಸೀಲ್ ಅನ್ನು ನೋಡಿ **328** ಗುರುತಿಸಿದ್ದು ಅದನ್ನು ನಿಷಿ **70)** ಎಂದು ಗುರುತಿಸಲಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.**1**

**ಪ್ರಶ್ನೆಃ29 :**ಅಸಾ **29** ದೀಪಕ್ ಎಂ.ಎಸ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ದಿನಾಂಕ**: 05-10-2009** ರಂದು ಪ್ರಕರಣದ ಕಡತವನ್ನು ಚಾಸಾ **53** ರವರಿಂದ ಪಡೆದುಕೊಂಡು ತನಿಖೆ ಮುಂದುವರಿಸಿದೆನು. ಅದೇ ದಿನ ಕೃತ್ಯ ಸ್ಥಳಕ್ಕೆ ಹೋಗಿ ಪಂಚರಾದ ಚಾ ಸಾ **8** ರಿಂದ **10** ರವರ ಸಮಕ್ಷಮ ಪಿರ್ಯಾದಿ ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ **11.00** ರಿಂದ **12.00** ಗಂಟೆಯವರೆಗೆ ಜರುಗಿಸಿ ಪಂಚರ ಸಹಿ ಪಡೆದಿರುವುದಾಗಿಯೂ ಹಾಗೂ ಸದರಿ ಪಂಚನಾಮೆಯು ಈಗಾಗಲೇ ನಿಪಿ **329** ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ**59(**ಡಿ**)** ಎಂದು ಗುರುತಿಸಲಾಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.**1**

**ಪ್ರಶ್ನೆಃ30 :**ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ದಿ **23-10-2009** ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಆ.**1**

**ಪ್ರಶ್ನೆಃ31 :**ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ದಿ**: 12-11-2009** ರಂದು ಸಕಲೇಶಪುರ ಎಸ್ ಬಿ ಎಂ ಬ್ಯಾಂಕ್ ಗೆ ಭೇಟಿ ನೀಡಿ ಪಂಚರಾದ ಚಾಸಾ**-11** ರಿಂದ **13** ರವರ ಸಮಕ್ಷಮ ಬ್ಯಾಂಕ್ ನವರು ಹಾಜರುಪಡಿಸಿದ ಈ ಪ್ರಕರಣಕ್ಕೆ ಸಂಬಂಧಿಸಿದ ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಎರಡು ಖಾತೆಗಳಿಗೆ ಸಂಬಂಧಿಸಿದ ಚಿಕ್ಕಿನ ವಿವರಗಳು ಹಾಗೂ ಖಾತೆ ತೆರೆಯುವ ಸಮಯದಲ್ಲಿ ನೀಡಿದ ದಾಖಲೆ ಮತ್ತು ಮಾದರಿ ಸಹಿಗಳನ್ನು ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ **12.00** ರಿಂದ **4.00** ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿ ಪಡೆದಿರುತ್ತೇನೆ ಎಂಬುದಾಗಿಯೂ ಹಾಗೂ ಸದರಿ ಪಂಚನಾಮೆಯನ್ನು ನಿಪಿ**-329** ಎಂದು**,** ಸಾಕ್ಷಿದಾರರ ಸಹಿಯನ್ನು ನಿಪಿ**-329** ಎ ಎಂದು ಗುರುತಿಸಲಾಯಿತು**.** ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ಅವರ ಠಾಣಾ ಪಿ ಎಫ್ **182/2009** ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡನು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಆ.**1**

**ಪ್ರಶ್ನೆಃ32 :**ಅ ಸಾ **30** ಲೀಲಾ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅವರಿಗೆ ಆರೋಪಿಯ ಪರಿಚಯವಿದ್ದು ಆತ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸದಲ್ಲಿದ್ದರು**. 2005** ರಿಂದ **2008** ನೇ ಸಾಲಿನಲ್ಲಿ ಅವರು ಸದರಿ ಪಂಚಾಯ್ತಿಯ ಉಪಾಧ್ಯಕ್ಷೆಯಾಗಿದ್ದು ಅಧ್ಯಕ್ಷರಾಗಿ ಮರಿಯಮ್ಮ ಇದ್ದರು**.** ಗಣೇಶ್ ಮತ್ತು ಸಿದ್ದಬಸವೇಗೌಡರವರು ಕಾರ್ಯದರ್ಶಿಯಾಗಿದ್ದರು**.** ವಾಟರ್ಮನ್ ಆಗಿ ಮಲ್ಲಿಕಾರ್ಜುನ ಮತ್ತು ಗೋಪಿನಾಥ ಇದ್ದರು**.** ಆರೋಪಿ ಎಲ್ಲರ ಜೊತೆ ವಿಶ್ವಾಸದಿಂದ ಇದ್ದರು**. 2007** ರಿಂದ **2009** ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿದ್ದ ಬಗ್ಗೆ ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿಯನ್ನು ಚಿಕ್ಕುಗಳಲ್ಲಿ ಖೊಟ್ಟಿ ಸಹಿ ಮಾಡಿ ಸದರಿ ಚಿಕ್ಕನ್ನು

ಆತನು ಬ್ಯಾಂಕ್ ಗೆ ನೀಡಿ ಹಣ ಪಡೆದುಕೊಂಡು ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ33** **:**ಸದರಿ ಸಾಕ್ಷಿ ತಮ್ಮ ಮುಂದುವರಿದ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಕಾರ್ಪೋರೇಷನ್ ಬ್ಯಾಂಕ್, ಕೆನರಾ ಬ್ಯಾಂಕ್ ಹಾಗೂ ಎಸ್ ಬಿ ಐ ಬ್ಯಾಂಕ್ ಗಳಲ್ಲಿ ಅಂದಾಜು ರೂ. **14** ಲಕ್ಷ ಹಣ ದುರ್ಬಳಕೆ ಮಾಡಿರುವ ವಿಷಯ ತಿಳಿಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅವರು ಪೊಲೀಸರಿಗೆ ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

**ಪ್ರಶ್ನೆಃ34** **:**ಅಸಾ **31** ಲಕ್ಷ್ಮಣ್‌ಗೌಡ.ಎಸ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ದಿನಾಂಕ: **15.01.2013** ರಂದು ಕಡತವನ್ನು ಚಾಸಾ- **55** ರವರಿಂದ ಪಡೆದುಕೊಂಡು ಪರಿಶೀಲಿಸಿ, ಅದೇ ದಿನ ಚಾಸಾ **2** ರಿಂದ **6,** ಚಾಸಾ **23** ರಿಂದ ಚಾಸಾ **49** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂಬುದಾಗಿಯೂ ಹಾಗೂ ದಿ: **08-03-2013** ರಂದು ತನಿಖೆಯು ಪೂರ್ಣಗೊಂಡಿದ್ದು ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾದಾರಗಳು ಕಂಡುಬಂದಿದ್ದರಿಂದ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

ಪ್ರಶ್ನೆಃ**35** **:**ಅ ಸಾ **32** ಪಾಲಾಕ್ಷ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ನಿಪಿ- **329** ರ ಪಂಚನಾಮೆಯಲ್ಲಿಯ ಅವ ಸಹಿಯನ್ನು ನೋಡಿ ಸಾಕ್ಷಿಯ ಸಹಿಯನ್ನು ನಿಪಿ **329**(ಬಿ) ಎಂದು ಗುರುತಿಸಲಾಯಿತು. ನಂತರ ದಿ: **12-11-2009** ರಂದು ಸಕಲೇಶಪುರದ ಬಿ.ಎಂ ರಸ್ತೆಯಲ್ಲಿರುವ ಎಸ್.ಬಿ.ಎಂ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಪಂಚನಾಮೆಗೆ ಬರಲು ತಿಳಿಸಿದ್ದರು. ಸದರಿ ಬ್ಯಾಂಕಿನಲ್ಲಿ ಅವರ ಹಾಗೂ ಪಂಚರಾದ ಚಾಸಾ-**12**

ಮತ್ತು 14 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 4.00 ರವರೆಗೆ ಪಂಚನಾಮ ಜರುಗಿಸಿ ಸ್ಥಳದಲ್ಲಿ ಅವರ ಸಹಿ ಪಡೆದು ಪಂಚನಾಮ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡರು. ಖಾತೆ ನಂ. 6278 ರಲ್ಲಿ 139 ಚೆಕ್ಕುಗಳು ಮತ್ತು ಖಾತೆ ನಂ. 4196 ರಲ್ಲಿ 55 ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡರು. ಸದರಿ ಚಿಕ್ಕುಗಳನ್ನು ಎರಡು ಕವರ್ ಗಳಲ್ಲಿ ಒಂದೊಂದು ಖಾತೆಗೆ ಸೇರಿದ ಚೆಕ್ಕುಗಳನ್ನು ಪ್ರತ್ಯೇಕವಾಗಿ ಹಾಕಿ ಡಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಆ.1

ಪ್ರಶ್ನೆ:36 : ಅ ಸಾ 33 ಮೋಹನ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ನಿಪಿ-329 ರ ಪಂಚನಾಮೆಯಲ್ಲಿಯ ಅವ ಸಹಿಯನ್ನು ನೋಡಿ ಸಾಕ್ಷಿಯ ಸಹಿಯನ್ನು ನಿಪಿ-329(ಬಿ) ಎಂದು ಗುರುತಿಸಲಾಯಿತು ನಂತರ ದಿ:12-11-2009 ರಂದು ಸಕಲೇಶಪುರದ ಬಿ.ಎಂ ರಸ್ತೆಯಲ್ಲಿರುವ ಎಸ್.ಬಿ.ಎಂ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಪಂಚನಾಮೆಗೆ ಬರಲು ತಿಳಿಸಿದ್ದರು. ಸದರಿ ಬ್ಯಾಂಕಿನಲ್ಲಿ ಅವರ ಹಾಗೂ ಪಂಚರಾದ ಚಾಸಾ-11 ಮತ್ತು 14 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 4.00 ರವರೆಗೆ ಪಂಚನಾಮ ಜರುಗಿಸಿ ಸ್ಥಳದಲ್ಲಿ ಅವರ ಸಹಿ ಪಡೆದು ಪಂಚನಾಮ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡರು. ಖಾತೆ ನಂ. 6278 ರಲ್ಲಿ 155 ಚೆಕ್ಕುಗಳು ಮತ್ತು ಖಾತೆ ನಂ. 4196 ರಲ್ಲಿ 55 ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡರು. ಸದರಿ ಚಿಕ್ಕುಗಳನ್ನು ಎರಡು ಕವರ್ ಗಳಲ್ಲಿ ಒಂದೊಂದು ಖಾತೆಗೆ ಸೇರಿದ ಚೆಕ್ಕುಗಳನ್ನು ಪ್ರತ್ಯೇಕವಾಗಿ ಹಾಕಿ ಡಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಆ.1

ಪ್ರಶ್ನೆ:37 :ಅ ಸಾ 34 ಸಂಗಪ್ಪಗೌಡ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ಅಮಾನತ್ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸದಿರಿ ಪಂಚನಾಮೆಯನ್ನು ನಿಪಿ-330 ಎಂದು ಸಾಕ್ಷಿಯ ಸಹಿಯನ್ನು ನಿಪಿ 330(ಎ) ಎಂದು ಗುರುತಿಸಲಾಯಿತು ನಂತರ 2009 ನೇ ಇಸವಿಯಲ್ಲಿ ಸಕಲೇಶಪುರದ ಬಿ.ಎಂ

ರಸ್ತೆಯಲ್ಲಿರುವ ಕಾರ್ಪೋರೇಶನ್ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಪಂಚನಾಮೆಗೆ ಬರಲು ತಿಳಿಸಿದ್ದರು. ಸದರಿ ಬ್ಯಾಂಕಿನಲ್ಲಿ ಅವರ ಹಾಗೂ ಪಂಚರಾದ ಚಾಸಾ-15 ಮತ್ತು 16 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 12.00 ರವರೆಗೆ ಪಂಚನಾಮ ಜರುಗಿಸಿ ಸ್ಥಳದಲ್ಲಿ ಅವರ ಸಹಿ ಪಡೆದು ಪಂಚನಾಮ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

ಪ್ರಶ್ನೆಃ38 :ಅಸಾ 35 ಪಿ.ಮಹೇಶ್ವರಯ್ಯ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ನಿಪಿ-330 ರ ಅಮಾನತ್ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 330(ಬಿ) ಎಂದು ಗುರುತಿಸಲಾಯಿತು. ಸುಮಾರು 15 ವರ್ಷಗಳ ಹಿಂದೆ ಸಕಲೇಶಪುರದ ಬಿ.ಎಂ ರಸ್ತೆಯಲ್ಲಿರುವ ಕಾರ್ಪೋರೇಶನ್ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಸದರಿ ಪಂಚಾಯ್ತಿಗೆ ಸಂಭಂದಿಸಿದ ಚೆಕ್ಕು ಗಳು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿ ಇರುವ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಲು ಕೋರಿದ್ದು ಕಾನೂನು ರೀತ್ಯಾ ಅವರು ಸದರಿ ದಾಖಲೆಗಳನ್ನು ಹಾಜರುಪಡಿಸಿದದು ಹಾಗೂ ಅವುಗಳನ್ನು ಪೊಲೀಸರು ಬ್ಯಾಂಕಿನಲ್ಲಿ ಅವರ ಹಾಗೂ ಪಂಚರಾದ ಚಾಸಾ-14 ಮತ್ತು ಮತ್ತೊಬ್ಬರ ಸಮಕ್ಷಮ ಪಂಚನಾಮ ಜರುಗಿಸಿ ಸ್ಥಳದಲ್ಲಿ ಅವರ ಸಹಿ ಪಡೆದು ಪಂಚನಾಮ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1

ಪ್ರಶ್ನೆಃ39 :ಅಸಾ 36 ಚಿದಾನಂದ ನಾಯಕ್ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ ನಿಪಿ-329 ರ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಸಾಕ್ಷಿಯ ಸಹಿಯನ್ನು ನಿಪಿ 329(ಡಿ) ಎಂದು ಗುರುತಿಸಲಾಯಿತು. ನಂತರ ದಿ: 12-11-2009 ರಂದು ಸಕಲೇಶಪುರದ ಬಿ.ಎಂ ರಸ್ತೆಯಲ್ಲಿರುವ ಎಸ್.ಬಿ.ಎಂ ಬ್ಯಾಂಕಿನಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ

ಸೇರಿದಂತೆ ಹಣ ದುರುಪಯೋಗವಾಗಿದೆ ಎಂದು ತಿಳಿಸಿ ಸದರಿ ಪಂಚಯ್ತಿಗೆ ಸಂಭಂದಿಸಿದ ಚೆಕ್ಕುಗಳನ್ನು ಹಾಜರುಪಡಿಸಲು ಕೇಳಿದರು ಅದರಂತೆ ಅವರು ಖಾತೆ ಸಂಖ್ಯೆ:**6278** ರಲ್ಲಿ **139** ಚೆಕ್ಕುಗಳು ಮತ್ತು ಖಾತೆ ನಂ. **4196** ರಲ್ಲಿ **55** ಚೆಕ್ಕುಗಳನ್ನು ಹಾಜರುಪಡಿಸಿದ್ದು ಮತ್ತು ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಮಾದರಿ ಸಹಿಗಳನ್ನು ಹಾಜರುಪಡಿಸುವಂತೆಯೂ ಸಹಾ ಕೇಳಿದ್ದು ಅದನ್ನು ಹಾಜರುಪಡಿಸಿರುತ್ತೇನೆ ಎಂಬುದಾಗಿಯೂ ಹಾಗೂ ಅವುಗಳನ್ನು ಅವರ ಬ್ಯಾಂಕಿನಲ್ಲಿ ಅವರ ಹಾಗೂ ಪಂಚರಾದ ಚಾಸಾ-**11** ಮತ್ತು **14** ರವರ ಸಮಕ್ಷಮ ಮಧ್ಯಾಹ್ನ **12.00** ರಿಂದ **4.00** ರವರೆಗೆ ಪಂಚನಾಮ ಜರುಗಿಸಿ ಸ್ಥಳದಲ್ಲಿ ಅವರ ಸಹಿ ಪಡೆದು ಪಂಚನಾಮ ಕಾಲದಲ್ಲಿ ಪೊಲೀಸರು ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಚೆಕ್ಕುಗಳನ್ನು ಅಮಾನತ್ತುಪಡಿಸಿಕೊಂಡು ಖಾಕಿ ಬಣ್ಣದ ಎರಡು ಲಕೋಟೆಗಳಲ್ಲಿ ಒಂದೊಂದು ಖಾತೆಗೆ ಸೇರಿದ ಚೆಕ್ಕುಗಳನ್ನು ಪ್ರತ್ಯೇಕವಾಗಿ ಹಾಕಿ ಡಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಅ.**1**

ಪ್ರಶ್ನೆ:**40 :**ಅ ಸಾ **37** ದೇವರಾಜ ಇವರು ತಮ್ಮ ಸಾಕ್ಷಿಯಲ್ಲಿ ಹೇಳುವುದೇನೆಂದರೆ**,** ಸಾಕ್ಷಿಯ ಅಮಾನತ್ ಪಂಚನಾಮೆಯಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿದ್ದು**,** ಸದರಿ ಪಂಚನಾಮೆಯನ್ನು ನಿಪಿ-**338** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ **338**(ಸಿ) ಎಂದು ಗುರುತಿಸಲಾಯಿತು. ಸುಮಾರು **10** ವರ್ಷಗಳ ಹಿಂದೆ ಪೊಲೀಸರು ನಗರ ಠಾಣೆಯಲ್ಲಿ ಒಂದು ದಾಖಲೆಗೆ ಅವರ ಸಹಿಯನ್ನು ಪಡೆದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರ:

ಅ.**1**

ಪ್ರಶ್ನೆ**41** ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿದಾರರು ಇದ್ದಾರೆಯೇ **?**

ಉತ್ತರ:

ಅ.**1**

ಪ್ರಶ್ನೆ **42** ಃ ನೀವು ಹೇಳುವುದೇನಾದರೂ ಇದೆಯೇ **?**

ಉತ್ತರ:

ಅ.1

ಮೇಲ್ಕಂಡ ಆರೋಪಿತರಾದ ನಿಮ್ಮ ವಿರುದ್ಧ ಲಭ್ಯವಿರುವ ಫಿರ್ಯಾದಿಯ ಪರ ಸಾಕ್ಷಿ ವಿಚಾರಣೆಯನ್ನು ಆರೋಪಿಯಾದ ನಿಮಗೆ ಓದಿ ಹೇಳಿ ನೀವು ನೀಡಿದ ಹೇಳಿಕೆಯನ್ನು ನಾನೇ ಸ್ವತಃ ದಾಖಲಿಸಿಕೊಂಡು ಸತ್ಯವಾಗಿ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**ದಿನಾಂಕ:04-02-2026**

ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಸಕಲೇಶಪುರ.**